ಕ್ರಸಂ.	ಯೋಜನೆಯ ಹೆಸರು	ಬಿಡುಗಡೆ ಮಾಡಲಾದ ಹಣವೆಷ್ಟು (ಲಕ್ಷದಲ್ಲಿ)
1.	ಎಸ್.ಜೆ.ಆರ್.ವೈ 20% (ಜಿ.ಪಂ)	21.068
2.	ಎಸ್.ಜೆ.ಆರ್.ವೈ 30% (ತಾ.ಪಂ)	
	1. ಧಾರವಾಡ	3.000
	2. ಹುಬ್ಬಳ್ಳಿ	3.481
	3. ನವಲಗುಂದ	3.920
	4. ಕುಂದಗೋಳ	1.494
	5. ಕಲಘಟಗಿ	1.600
3.	ಎಸ್.ಜೆ.ಆರ್.ವೈ. 50% (ಗ್ರಾ.ಪಂ)	0.305
4.	ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	3.860
5.	ವನಸಂವರ್ಧನೆ ಯೋಜನೆ	
	1. ಧಾರವಾಡ	0.877
	2. ಹುಬ್ಬಳ್ಳಿ	0.508
	3. ಕಲಘಟಗಿ	0.696
	4. ಕುಂದಗೋಳ	0.605
6.	ಜೆ.ಬಿ.ಐ.ಸಿ.	9.560
	ಒಟ್ಟು	**50.974**

1307 (1796) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳ ಬರ ಪೀಡಿತ ಎಂದು ಘೋಷಿಸಲಾಗಿದೆ;

ಆ) ಧಾರವಾಡ ಜಿಲ್ಲೆಯ ಎಷ್ಟು ತಾಲ್ಲೂಕುಗಳು ಬರಪೀಡಿತಗೊಂಡಿದೆ;

ಇ) ಬರ ಪರಿಹಾರಕ್ಕೆ ಸರ್ಕಾರ ತೆಗೆದುಕೊಂಡು ಕ್ರಮಗಳೇನು;

ಈ) ಬರ ಪರಿಹಾರಕ್ಕಾಗಿ ಕೇಂದ್ರದಿಂದ ಬಿಡುಗಡೆಯಾಗಿರುವ ಆಹಾರಧಾನ್ಯಗಳೆಷ್ಟು ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣವೆಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) :

ಅ) 128 ತಾಲ್ಲುಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ.

ಆ) ಧಾರವಾಡ ಜಿಲ್ಲೆಯಲ್ಲಿ ನವಲಗುಂದ ಮತ್ತು ಕುಂದಗೋಳ ತಾಲ್ಲೂಕುಗಳ ಬರಪೀಡಿತವೆಂದು ಘೋಷಿಸಿದೆ.

ಇ) ರಾಜ್ಯದ ಬರಪೀಡಿತ ತಾಲ್ಲೂಕುಗಳಲ್ಲಿ ಬರ ಪರಿಹಾರ ಕಾರ್ಯ ಕೈಕೊಳ್ಳಲು ರಾಜ್ಯ ಸರ್ಕಾರವು ಒಟ್ಟು ರೂ.277.00 ಕೋಟಿ ಹಣ ಬಿಡುಗಡೆ ಮಾಡಿದೆ ಹಾಗೂ 50,000 ಮೆ.ಟನ್ ಆಹಾರಧಾನ್ಯ ಬಿಡುಗಡೆ ಮಾಡಿದೆ. ಈ ಹಣವನ್ನು ಉದ್ಯೋಗ ಸೃಜಿಸುವಂತಹ ಕಾಮಗಾರಿಗಳಾದ ಸಣ್ಣ ನೀರಾವರಿ ಕೆರೆಗಳ ದುರಸ್ತಿ ಕಾಮಗಾರಿಗಳು, ಜಲ ಸಮೃದ್ಧಿ ಕಾಮಗಾರಿಗಳು, ಚೆಕ್ ಡ್ಯಾಮ್ಸ್, ಕಾಮಗಾರಿಗಳನ್ನು ಕೈಕೊಳ್ಳಲು ಹಾಗೂ ಕುಡಿಯುವ ನೀರು ಒದಗಿಸಲು ಹಾಗೂ ಮೇವು ಖರೀದಿಸಲು ಉಪಯೋಗಿಸಲಾಗುತ್ತಿದೆ. ಅಂತರ ರಾಜ್ಯ ಮೇವು ಸಾಗಾಣಿಕೆಯನ್ನು ನಿರ್ಬಂಧಿಸಲಾಗಿದೆ.

ಈ) ಬರ ಪರಿಹಾರಕ್ಕೆ ಕೇಂದ್ರ ಸರ್ಕಾರದಿಂದ 50 ಮೆ.ಟನ್ ಆಹಾರಧಾನ್ಯ ಬಿಡುಗಡೆಯಾಗಿರುತ್ತದೆ. ರಾಜ್ಯ ಸರ್ಕಾರವು ಬರ ಪರಿಹಾರಕ್ಕೆ ರೂ.277.00 ಕೋಟಿ ಹಣ ಬಿಡುಗಡೆ ಮಾಡಿದೆ.

1308 (1443) ಶ್ರೀ ಅಂಜನಾಮೂರ್ತಿ (ನೆಲಮಂಗಲ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 20 ತಿಂಗಳಿಂದ ಬರ ಪರಿಹಾರದಡಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ;